**ಕರ್ನಾಟಕ ಸರ್ಕಾರ**

# ಆಯುಕ್ತರವರ ಕಾರ್ಯಾಲಯ, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ಪಶುಪಾಲನಾ ಭವನ, ಸಿಬಿಐ ಕಚೇರಿ ಎದುರು, ಬೆಂಗಳೂರು-560 024.

ಪ್ರಕಟಣೆ ಸಂಖ್ಯೆ: ಆಪಸಂ : ಸಿಬ್ಬಂದಿ-ಎ5 : ವಿವ-62 : 2024 ದಿನಾಂಕ:**13-12-2024**

## ಅಧಿಸೂಚನೆ

**ವಿಷಯ:** 120 ಪಶುವೈಧ್ಯಾಧಿಕಾರಿಗಳ ಹುದ್ದೆಗಳನ್ನು **ಗುತ್ತಿಗೆ ಆಧಾರದ ಮೇಲೆ** ನೇಮಿಸಲು ಅರ್ಜಿಗಳನ್ನು ಆಹ್ವಾನಿಸುವ ಕುರಿತು

**ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಲಾದ ಕೊನೆಯ ದಿನಾಂಕ: 25-12-2024. (ಮಧ್ಯರಾತ್ರಿಯವರೆಗೆ)**

*****

ಸರ್ಕಾರದ ಅಧಿಸೂಚನೆ ಸಂಖ್ಯೆ: ಇ-ಪಸಂಮೀ 31ಪಸಸೇ 2024 ಬೆಂಗಳೂರು ದಿನಾಂಕ:07-06-2024 ರ ಆದೇಶದನ್ವಯ 400 ಪಶುವೈದ್ಯಾಧಿಕಾರಿಗಳ ನೇಮಕಾತಿಯ ಪ್ರಕ್ರಿಯೆ ಕೈಗೊಂಡು ಭರ್ತಿಯಾಗದೇ ಉಳಿದ **120** ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು (ಪಶುವೈದ್ಯಾಧಿಕಾರಿ ಹುದ್ದೆಯ ವೇತನ ಶ್ರೇಣಿಯಲ್ಲಿನ ಕನಿಷ್ಟ ಹಂತದ ಮೊತ್ತ ರೂ 52650 ಕ್ಕೆ 10/- ರೂ ಕಡಿತಗೊಳಿಸಿ) ಪ್ರತಿ ಮಾಹೆ ರೂ. 52640/- ಮೊತ್ತಕ್ಕೆ **ಗುತ್ತಿಗೆ ಆಧಾರದ ಮೇಲೆ ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು** ಈ ಪ್ರಕಟಣೆಯಲ್ಲಿ ನಮೂದಿಸಿರುವ ನಿಬಂಧನೆಗಳಂತೆ ಅರ್ಜಿಗಳನ್ನು ಆನ್ ಲೈನ್ ಮುಖಾಂತರ ಸ್ವೀಕರಿಸಲಾಗುವುದು.

1. ಅಭ್ಯರ್ಥಿಗಳ ಆಯ್ಕೆಯನ್ನು ಬಿ.ವಿ.ಎಸ್ಸಿ / ಬಿ.ವಿ.ಎಸ್ಸಿ ಅಂಡ್ ಎ.ಹೆಚ್ ಪದವಿಯಲ್ಲಿ ಎಲ್ಲಾ ವರ್ಷಗಳಲ್ಲಿ ಗಳಿಸಿದ ಒಟ್ಟು ಶೇಕಡಾವಾರು ಅಂಕಗಳ ಅರ್ಹತೆ ಆಧಾರದ ಮೇಲೆ ಹಾಗೂ ಸರ್ಕಾರದ ಮೀಸಲಾತಿಗನುಗುಣವಾಗಿ ನಡೆಸಲಾಗುವುದು.
2. ಅಭ್ಯರ್ಥಿಗಳು ಅರ್ಜಿಯನ್ನು **ದಿನಾಂಕ:16-12-2024ರಿಂದ 25-12-2024ರೊಳಗಾಗಿ** NIC Software ಆನ್ ಲೈನ್ ಮುಖಾಂತರ https://ahvs.karnataka.gov.in ನಲ್ಲಿ ಭರ್ತಿ ಮಾಡಿ ಸಲ್ಲಿಸುವುದು.
3. ನಿಗಧಿಪಡಿಸಿದ ವಿದ್ಯಾರ್ಹತೆ:- ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಂದರೆ ದಿನಾಂಕ: 13-12-2024ರ ಒಳಗಾಗಿ ಅಭ್ಯರ್ಥಿಯು ಭಾರತದಲ್ಲಿ ಕಾನೂನು ರೀತ್ಯ ಸ್ಥಾಪಿಸಲಾದ ಯಾವುದೇ ಪಶುವೈದ್ಯಕೀಯ ವಿಜ್ಞಾನ ವಿಶ್ವವಿದ್ಯಾಲಯ ಅಥವಾ ಕೃಷಿ ವಿಶ್ವವಿದ್ಯಾಲಯದಿಂದ ಬಿ.ವಿ.ಎಸ್‌ಸಿ / ಬಿ.ವಿ.ಎಸ್‌ಸಿ ಅಂಡ್ ಎಹೆಚ್ ಪದವಿಯನ್ನು ಪಡೆದಿರಬೇಕು ಹಾಗೂ ದಿ: 15-12-2024 ರ ಒಳಗಾಗಿ ಕರ್ನಾಟಕ ಪಶುವೈದ್ಯಕೀಯ ಪರಿಷತ್ತಿನ ಕಾಯ್ದೆ 1984ರ ಅಡಿಯಲ್ಲಿ ಕೆ.ವಿ.ಸಿ ನೊಂದಣಿಯಾಗಿರಬೇಕು.
4. ವಯೋಮಿತಿ: ಅಭ್ಯರ್ಥಿಗಳು ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಅಂತಿಮ ದಿನಾಂಕದಂದು ಕನಿಷ್ಠ ವಯೋಮಿತಿ 18 ವರ್ಷ ಪೂರ್ಣಗೊಂಡಿರಬೇಕು ಹಾಗೂ ನಿಗದಿತ ವರ್ಗವಾರು ಗರಿಷ್ಠ ವಯೋಮಿತಿಯನ್ನು ಮೀರಿರಬಾರದು. ವಯೋಮಿತಿಯನ್ನು ಸರ್ಕಾರದ ಅಧಿಸೂಚನೆ ಸಂ: ಡಿಪಿಎಆರ್:42:ಎಸ್‌ಆರ್‌ಆರ್:2008 ದಿನಾಂಕ:18-12-2008ರ ಮೇರೆಗೆ ನಿಗದಿಪಡಿಸಲಾಗಿದೆ.

| | |
|---|---|
| ಸಾಮಾನ್ಯ ವರ್ಗ | 35 ವರ್ಷಗಳು |
| ಪ್ರವರ್ಗ II ಎ, II ಬಿ ಪ್ರವರ್ಗ III ಎ, III ಬಿ- | 38 ವರ್ಷಗಳು |
| ಪಜಾ., ಪ.ಪಂ, ಪ್ರವರ್ಗ-I | 40 ವರ್ಷಗಳು |

4.1 ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಸಶಸ್ತ್ರ ಕೇಂದ್ರ ದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಆ ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳಷ್ಟು ಗರಿಷ್ಠ ವಯೋಮಿತಿಗೆ ವಿನಾಯಿತಿ ನೀಡಿದೆ.

ವಿವರಣೆ: ಮಾಜಿ ಸೈನಿಕ ಎಂದರೆ ಕೇಂದ್ರದ ಸಶಸ್ತ್ರ ದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ

ಅಯೋಧನಂತೆಯಾಗಲಿ) ಸೇವೆ ಸಲ್ಲಿಸಿದ ವ್ಯಕ್ತಿ. ಆದರೆ ಡಿಫೆನ್ಸ್ ಸೆಕ್ಯುರಿಟಿ ಕಾರ್ಪಸ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ;

ಮತ್ತು

a) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ;

ಅಥವಾ

b) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಗೆ ದೋಷ ಪೂರಿತನಾದವನೆಂದೋ ಅಥವಾ ವ್ಯಕ್ತಿಯ ಹಿಡಿತಕ್ಕೂ ದಾಟಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಅಂತಹ ಸೇವೆಯಿಂದ ಬಿಡುಗಡೆಯಾದವನು; ಅಥವಾ

c) ಸ್ವಂತ ಕೋರಿಕೆ ಮೇರೆಗೆ ಅಲ್ಲದೆ ಸಂಸ್ಥೆಯ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ ; ಅಥವಾ

d) ತನ್ನ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ವರ್ತನೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದು ಹಾಕಿರುವ ಅಥವಾ ಕರ್ತವ್ಯ ಪರಿಗಣಿಸಿದ ಮತ್ತು ಅವರಿಗೆ ಗ್ರಾಚ್ಯುಯಿಟಿ ನೀಡಿರುವ ವ್ಯಕ್ತಿಯಲ್ಲದ ನಿರ್ಧಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಪ್ರಾಂತ್ಯದ ಸೇನೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು ಸೇರ್ಪಡೆಯಾಗುತ್ತಾರೆ.

   i. ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂ ದಿದ ಪಿಂಚಣಿದಾರರು
   ii. ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಮರ್ಥತೆ ಹೊಂದಿ ಬಿಡುಗಡೆಯಾದ ವ್ಯಕ್ತಿ
   iii. ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು

5. ಜಾತಿ / ಮೀಸಲಾತಿ ಪ್ರಮಾಣ ಪತ್ರಗಳು ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ನಮೂನೆಗಳಲ್ಲಿಯೇ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು.

| | | |
|---|---|---|
| I. | ಪರಿಶಿಷ್ಟ ಜಾತಿ ಮಾತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು | ನಮೂನೆ 'ಡಿ' |
| II. | ಪ್ರವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳು | ನಮೂನೆ 'ಇ' |
| III. | ಪ್ರವರ್ಗ-2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯಥಿಗಳು | ನಮೂನೆ 'ಎಫ್' |

ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದಿಟ್ಟುಕೊಂಡು ಅದೇ ಪ್ರಮಾಣ ಪತ್ರವನ್ನು ಮೂಲ ದಾಖಲಾತಿಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ಅರ್ಹರಾದಲ್ಲಿ ಮಾತ್ರ ಸಾಮಾನ್ಯ ಅರ್ಹತೆಯಡಿಯಲ್ಲಿ ಪರಿಗಣಿಸಲಾಗುವುದು.

5.1 ಗ್ರಾಮೀಣ ಅಭ್ಯರ್ಥಿಗಳೆಂದು ಮೀಸಲಾತಿ ಬಯಸುವವರು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:08:ಸೆನೆನಿ:2001 ದಿನಾಂಕ:13-02-2001ರಲ್ಲಿ ನಿಗದಿಪಡಿಸಿದ ನಮೂನೆ-1 ಮತ್ತು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/96/ಸೇನೇನಿ/2005 ದಿ:10-08-2005ರಲ್ಲಿ ನಿಗಧಿಪಡಿಸಲಾದ ನಮೂನೆ-2ರಲ್ಲಿ ಅಭ್ಯರ್ಥಿಗಳು ಉತ್ತೀರ್ಣರಾದ ಸಂಸ್ಥೆಯ ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು / ಮುಖ್ಯೋಪಾಧ್ಯಾಯಿನಿಯರಿಂದ ಕ್ಷೇತ್ರ ಶಿಕ್ಷಣಾಧಿಕಾರಿಯ ಮೇಲು ಸಹಿಯೊಂದಿಗೆ ಪಡೆಯಬೇಕು. ಈ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ಅಂತಿಮವಾಗಿ ವ್ಯಾಸಂಗ ಮಾಡಿದ ಸಂಸ್ಥೆ / ಶಾಲೆಗಳಲ್ಲಿ ಅಭ್ಯಾಸ ಮಾಡಿದ್ದಲ್ಲಿ ಈ ಬಗ್ಗೆ ಆ ಎಲ್ಲಾ ಸಂಸ್ಥೆಗಳಲ್ಲಿ ತಪಾಸಣೆ ಆಗಿರಬೇಕು.

5.2 ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ:59:ಶಾಸನ:2000, ದಿನಾಂಕ:06-01-2001ರಲ್ಲಿ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿಗಾಗಿ ವಿಧೇಯಕ 2000ದಡಿ ಅವಕಾಶ ಕಲ್ಪಿಸಿ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಸರ್ಕಾರವು ದಿನಾಂಕ:13-02-2001ರಲ್ಲಿ ಜಾರಿಗೊಳಿಸಲಾದ ಆದೇಶ ಸಂಖ್ಯೆ: ಸಿಆಸುಇ:08:ಸೆನೆನಿ:2001 ನಿಯಮಗಳ ಕಂಡಿಕೆ 3,4 ಹಾಗೂ 5(1) ರಿಂದ (3)ರನ್ನು ಈ ಕೆಳಗೆ ಉದ್ಧರಿಸಿದೆ.

5.3 ಸದರಿ ಅಧಿನಿಯಮದಲ್ಲಿ ಗ್ರಾಮೀಣ ಅಭ್ಯರ್ಥಿಯನ್ನು ಈ ಕೆಳಗೆ ಉದ್ಧರಿಸಿದಂತೆ ಪರಿಭಾಷಿಸಲಾಗಿದೆ.

5.4 ಗ್ರಾಮೀಣ ಅಭ್ಯರ್ಥಿ ಎಂದರೆ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರಬೇಕು.

5.5 ಈ ಹಿನ್ನೆಲೆಯಲ್ಲಿ ಮೇಲೆ ವಿವರಿಸಿದ ಅಂಶಗಳನ್ನು ಒಳಗೊಂಡ, ಅಂದರೆ (1) ವ್ಯಾಸಂಗ (Study) (2) ಮೀಸಲಾತಿಯ ವರ್ಗ ಮತ್ತು (3) ಮೇಲುಸ್ತರದ ಪರಿಕಲ್ಪನೆ (Creamy Layer Concept) ಈ ಅಂಶಗಳನ್ನು ಒಳಗೊಂಡ ಪ್ರಮಾಣ ಪತ್ರವನ್ನು ಯಾರು ನೀಡಬೇಕು ಎಂಬ ಬಗ್ಗೆ ಸರ್ಕಾರ ಪರಿಶೀಲಿಸಿ ಈ ಕೆಳಕಂಡತೆ ಆದೇಶಿಸಿದೆ.

6. ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000ರ ಸೆಕ್ಷನ್ 5 ರಿಂದ ಈ ಕೆಳಕಂಡ ಕಾರ್ಯ ವಿಧಾನವನ್ನು ನಿಗಧಿಪಡಿಸಿದೆ.

   a. ಸಂಬಂಧಿಸಿದ ಅಭ್ಯರ್ಥಿಯು ಯಾವ ಇತರೆ ಹಿಂದುಳಿದ ವರ್ಗಕ್ಕೆ (Other Backward Class) ಸೇರಿದ್ದಾನೆ (ಅದರಲ್ಲಿ ಅವನು ಮೇಲುಸ್ತರದ ಪರಿಕಲ್ಪನೆಯಡಿಯಲ್ಲಿ (Cramy Layer Concept) ಬರುವುದಿಲ್ಲವೆನ್ನುವುದು ಒಳಗೊಂಡಿರುತ್ತದೆ) ಎನ್ನುವ ಬಗ್ಗೆ ಸರ್ಕಾರ (ಅಂದರೆ ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿನ ಸಮಾಜ ಕಲ್ಯಾಣ ಇಲಾಖೆ) ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990ರಡಿಯಲ್ಲಿ ನಿಗಧಿಪಡಿಸಿದ ಕಾರ್ಯ ವಿಧಾನದ ಪ್ರಕಾರ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು. (ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ-1 ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಮೇಲುಸ್ತರದ ಪರಿಕಲ್ಪನೆ (Cramy Layer Concept) ಅನ್ವಯವಾಗುವುದಿಲ್ಲ). ಅಂದರೆ ಜನರಲ್ ಮೆರಿಟ್ ಸೇರಿದಂತೆ ಹಿಂದುಳಿದ ವರ್ಗಗಳಾದ ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ, ಮತ್ತು ಪ್ರವರ್ಗ-3ಬಿ ಅಭ್ಯರ್ಥಿಗಳಿಗೆ ಮೇಲುಸ್ತರದ ಪರಿಕಲ್ಪನೆ ಅನ್ವಯವಾಗುತ್ತದೆ.

   b. ಜನರಲ್ ಮೆರಿಟ್ ವರ್ಗಕ್ಕೆ ಸೇರಿದ ಅಂದರೆ ಮೇಲುಸ್ತರದ ಪರಿಕಲ್ಪನೆಯ ವ್ಯಾಪ್ತಿಯಲ್ಲಿ ಬಾರದ ಗ್ರಾಮೀಣ ಅಭ್ಯರ್ಥಿಗಳು ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಸೀಲ್ದಾರ್ ರವರಿಂದ ಪಡೆಯತಕ್ಕದ್ದು

7. ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಆಸುಇ:71:ಸೆನೆನಿ:2001 ದಿನಾಂಕ:24-10-2002 ರನ್ವಯ ಶೇಕಡಾ 5% ರಷ್ಟು ಹುದ್ದೆಗಳನ್ನು (18 ಹುದ್ದೆಗಳು) ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

8. ಈ ಅಧಿಸೂಚನೆಯನ್ವಯ ಆಯ್ಕೆಯಾಗುವ ಅಭ್ಯರ್ಥಿಗಳು ರಾಜ್ಯದ್ಯಾದಂತ ಜಿಲ್ಲಾವಾರು ಗುರುತಿಸಿದ ಹುದ್ದೆಗಳಲ್ಲಿ ಮಾತ್ರ ಸೇವೆ ಸಲ್ಲಿಸಲು ಬದ್ಧರಾಗಿರತಕ್ಕದ್ದು.

9. 120 ಪಶುವೈದ್ಯಾಧಿಕಾರಿ ಹುದ್ದೆಗಳು ನೇರ ನೇಮಕಾತಿ ಮೂಲಕ ಭರ್ತಿಯಾಗುವವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದ ಮೊದಲು ಅಲ್ಲಿಯವರೆಗೆ. ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ಪಶುವೈದ್ಯರ ಸೇವೆಯನ್ನು ಗರಿಷ್ಟ 364 ದಿನಗಳವರೆಗೆ ಸೇವೆಯನ್ನು ಪಡೆದು ಒಂದು ದಿನದ ಅವಧಿಯ ನಂತರ ಅವಶ್ಯಕತೆಯನುಗುಣವಾಗಿ ಸೇವೆಯನ್ನು ಮುಂದುವರಿಸಲಾಗುವುದು.

10. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 149 ಎಸ್ಆರ್ಆರ್ 2020 ದಿನಾಂಕ: 25-09-2020ರಲ್ಲಿ ರಾಜ್ಯ ಸಿವಿಲ್ ಸೇವೆಗಳ ನೇರ ನೇಮಕಾತಿಗಳಲ್ಲಿ ವಿಕಲಚೇತನರಿಗೆ ಕಲ್ಪಿಸಿರುವ ಸಮೂಹ- ಎ" ಮತ್ತು ಬಿ" ಗುಂಪಿನ ಹುದ್ದೆಗಳಿಗೆ ಶೇಕಡ 4 ರಷ್ಟು ಮೀಸಲಾತಿ ಕಲ್ಪಿಸಿದ್ದು, ಇದರನ್ವಯ ಶೇಕಡ 40 ಕ್ಕಿಂತ ಕಡಿಮೆ ಇಲ್ಲದಂತಹ ವಿಶೇಷ ಚೇತನವುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರು. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿ.ಆ.ಸು.ಇ:115:ಶೆನೆನಿ:2005 ದಿನಾಂಕ:19-11-2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ವಿಶೇಷ ಚೇತನದ ಬಗ್ಗೆ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು. ಮೂಲ ದಾಖಲಾತಿ ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಇತರೆ ಯಾವುದೇ ನಮೂನೆಯಲ್ಲಿ ವಿಶೇಷ ಚೇತನರ ಬಗ್ಗೆ ಪಡೆಯಲಾಗಿರುವ

ಪ್ರಮಾಣ ಪತ್ರಗಳನ್ನು / ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ. ಈ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯಲ್ಲಿ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದ್ದು.

11. **ಗುತ್ತಿಗೆ ಆಧಾರದ ನೇಮಕಾತಿಯ ಷರತ್ತುಹಾಗೂ ನಿಬಂದನೆಗಳು**

1. ಗುತ್ತಿಗೆ ಆಧಾರದ ನೇಮಕಾತಿಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ಯಾವುದೇ ಸಂದರ್ಭದಲ್ಲಿ ಖಾಯಂಗೊಳಿಸಲು ಅವಕಾಶವಿರುವುದಿಲ್ಲ.
2. ಗುತ್ತಿಗೆ ಆಧಾರದ ಮೇಲೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಕರ್ನಾಟಕದಲ್ಲಿ ವಾಸವಾಗಿರಬೇಕು.
3. ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಪಶುವೈದ್ಯಾಧಿಕಾರಿಗಳಿಗೆ ನಿಗದಿಪಡಿಸಿರುವ ಮಾಸಿಕ ವೇತನವನ್ನು ಹೊರತುಪಡಿಸಿ ಇತರೆ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ.
4. ಗುತ್ತಿಗೆ ಮೇರೆಗೆ ಆಯ್ಕೆಯಾಗುವ ಪಶುವೈದ್ಯಾಧಿಕಾರಿಗಳು ಸ್ಥಳ ನಿಯುಕ್ತಿಗೊಳಿಸುವ ಸ್ಥಳದಲ್ಲಿಯೆ ಕಡ್ಡಾಯವಾಗಿ ಕರ್ತವ್ಯ ನಿರ್ವಹಿಸತಕ್ಕದ್ದು.
5. ಗುತ್ತಿಗೆ ಮೇರೆಗೆ ನೇಮಕವಾದ ಅಭ್ಯರ್ಥಿಯು ಮಧ್ಯದಲ್ಲಿ ಸೇವೆಯನ್ನು ತ್ಯಜಿಸಲು ಇಚ್ಛಿಸಿದಲ್ಲಿ ಒಂದು ತಿಂಗಳ ಮುಂಚಿತವಾಗಿ ಮೇಲಾಧಿಕಾರಿಗಳ ಮುಖಾಂತರ ಆಯುಕ್ತಾಲಯಕ್ಕೆ ಮನವಿ ಸಲ್ಲಿಸುವುದು.
6. ಗುತ್ತಿಗೆ ಮೇರೆಗೆ ನೇಮಕವಾದ ಅಭ್ಯರ್ಥಿಯು ಯಾವುದೇ ಮಾಹಿತಿ ನೀಡದೇ ಕರ್ತವ್ಯಕ್ಕೆ ಗೈರು ಹಾಜರಾದ್ದಲ್ಲಿ ಕನಿಷ್ಟ ಒಂದು ತಿಂಗಳ ವೇತನವನ್ನುಸರ್ಕಾರಕ್ಕೆ ಹಿಂದಿರುಗಿಸತಕ್ಕದ್ದು.
7. ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೆ ವೈದ್ಯಕೀಯ ಕಾರಣಗಳ ಮೇರೆಗಾಗಲಿ ಅಥವಾ ಬೇರೆ ಕಾರಣಗಳಿಂದಾಗಲೀ ಅನಧಿಕೃತ ಗೈರುಹಾಜರಿಯಾದಲ್ಲಿ ಇವರುಗಳ ಗುತ್ತಿಗೆ ಆಧಾರದ ನೇಮಕಾತಿ ಸೇವೆಯನ್ನು ರದ್ದು ಗೊಳಿಸಲಾಗುವುದು.
8. ಗುತ್ತಿಗೆ ಆಧಾರದ ಮೇರೆಗೆ ಆಯ್ಕೆಯಾದ ಸದರಿ ಪಶುವೈದ್ಯಾಧಿಕಾರಿಗಳ ದುರ್ನಡತೆ, ನಿರ್ಲಕ್ಷತೆಯಿಂದ ಸರ್ಕಾರಕ್ಕೆ ಸಂಭವಿಸಬಹುದಾದ ಎಲ್ಲಾ ನಷ್ಟಗಳನ್ನು ಸರ್ಕಾರಕ್ಕೆ ಸದರಿ ಪಶುವೈದ್ಯಾಧಿಕಾರಿಗಳು ಭರಿಸಬೇಕಾಗಿರುತ್ತದೆ.
9. ಗುತ್ತಿಗೆ ಆಧಾರಿತ ಪಶುವೈದ್ಯಾಧಿಕಾರಿಗಳು ತಮ್ಮ ಕರ್ತವ್ಯವನ್ನು ಪಾಲಿಸುತ್ತಿರುವಾಗ ಅಥವಾ ನೆರವೇರಿಸುತ್ತಿರುವಾಗ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
10. ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸಲು ಬದ್ಧರಾಗಿರತಕ್ಕದ್ದು.

12. ಮೀಸಲಾತಿಗೆ ಅನುಗುಣವಾಗಿ ಹುದ್ದೆಗಳ ವರ್ಗೀಕರಣ

**ಅನುಬಂಧ-1**

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸಹಿಮ 2022 ದಿನಾಂಕ:28-12-2022ರಂತೆ ಗುತ್ತಿಗೆ ಆಧಾರದ ಮೇಲೆ 386 ಪಶುವೈದ್ಯಾಧಿಕಾರಿಗಳ ನೇರ ನೇಮಕಾತಿ ಸಂಬಂಧ ಹುದ್ದೆಗಳ ವರ್ಗೀಕರಣ ಮತ್ತು ಸಮತಲ ಮೀಸಲಾತಿಯಡಿ ಹಂಚಿಕೆಯಾದ ವಿವರ

| ಕ್ರ. ಸಂ. | ವರ್ಗಗಳು | ಹುದ್ದೆಗಳ ವರ್ಗೀಕರಣ | ಮೀಸಲಿರಿಸಿದ ಹುದ್ದೆಗಳ ಸಂಖ್ಯೆ | | | | | | | |
|---|---|---|---|---|---|---|---|---|---|---|
| | | | ಮ.ಅ | ಗ್ರಾ. ಅ | ಮಾ.ಸೈ. | ವಿಕಲ ಚೇತನರು | ಕನ್ನಡ | ತೃ ಲಿಂಗಿ | ಇತರೆ | ಒಟ್ಟು |
| 1 | ಪರಿಶಿಷ್ಟ ಜಾತಿ, | | 4 | 0 | | 4 | 0 | | 3 | 11 |
| 2 | ಪರಿಶಿಷ್ಟ ಪಂಗಡ, | | 7 | 3 | | 2 | 1 | 1 | 6 | 20 |
| 3 | ಪ್ರವರ್ಗ-1, | | 2 | 0 | | 1 | | | 0 | 3 |
| 4 | ಪ್ರವರ್ಗ-2ಎ, | | 7 | 1 | | 1 | | | 1 | 10 |
| 5 | ಪ್ರವರ್ಗ-2ಬಿ, | | 4 | 1 | | 1 | | | 1 | 7 |
| 6 | ಪ್ರವರ್ಗ-3ಎ, | | 1 | 1 | | 1 | 1 | | 1 | 5 |
| 7 | ಪ್ರವರ್ಗ-3ಬಿ | | 3 | 2 | | 1 | | | 1 | 7 |
| 8 | ಸಾಮಾನ್ಯ | | 14 | 13 | | 3 | 3 | | 17 | 50 |
| | ಒಟ್ಟು | **0** | **42** | **21** | **0** | **14** | **5** | **1** | **30** | **113** |

## ಅನುಬಂಧ-2

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸಹಿಮ 2022 ದಿನಾಂಕ:28-12-2022ರಂತೆ ಗುತ್ತಿಗೆ ಆಧಾರದ ಮೇಲೆ 14 ಪಶುವೈದ್ಯಾಧಿಕಾರಿಗಳ ನೇರ ನೇಮಕಾತಿ ಸಂಬಂಧ ಹುದ್ದೆಗಳ ವರ್ಗೀಕರಣ ಮತ್ತು ಸಮತಲ ಮೀಸಲಾತಿಯಡಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಹಂಚಿಕೆಯಾದ ವಿವರ

| ಕ್ರ. ಸಂ. | ವರ್ಗಗಳು | ಹುದ್ದೆಗಳ ವರ್ಗೀಕರಣ | ಮೀಸಲಿರಿಸಿದ ಹುದ್ದೆಗಳ ಸಂಖ್ಯೆ | | | | | | | |
|---|---|---|---|---|---|---|---|---|---|---|
| | | | ಮ.ಅ | ಗ್ರಾ. ಅ | ಮಾ.ಸೈ. | ವಿಕಲ ಚೇತನರು | ಕನ್ನಡ | ತೃ ಲಿಂಗಿ | ಇತರ | ಒಟ್ಟು |
| 1 | ಪರಿಶಿಷ್ಟ ಜಾತಿ, | | 1 | | | | | | 1 | 2 |
| 2 | ಪರಿಶಿಷ್ಟ ಪಂಗಡ, | | | | | | | | 1 | 1 |
| 3 | ಪ್ರವರ್ಗ-1, | | | | | | | | 1 | 1 |
| 4 | ಪ್ರವರ್ಗ-2ಎ, | | 1 | | | | | | | 1 |
| 5 | ಪ್ರವರ್ಗ-2ಬಿ, | | | | | | | | | 0 |
| 6 | ಪ್ರವರ್ಗ-3ಎ, | | | | | | | | | 0 |
| 7 | ಪ್ರವರ್ಗ-3ಬಿ | | | | | | | | | 0 |
| 8 | ಸಾಮಾನ್ಯ | | 1 | | | | | | 1 | 2 |
| | ಒಟ್ಟು | **0** | **3** | **0** | **0** | **0** | **0** | **0** | **4** | **7** |

ವಿ.ಸೂ: ಮ.ಅ=ಮಹಿಳಾ ಅಭ್ಯರ್ಥಿ, ಗ್ರಾ.ಅ=ಗ್ರಾಮೀಣ ಅಭ್ಯರ್ಥಿ, ಮಾ.ಸೈ=ಮಾಜಿ ಸೈನಿಕ, ಕ.ಮಾ=ಕನ್ನಡ ಮಾಧ್ಯಮ

| ಕ್ರ. ಸಂ. | ವೈಕಲ್ಯತೆಯ ಸ್ವರೂಪ | ಗುರುತಿಸಲಾದ ಶೇಕಡವಾರು | ಗುರುತಿಸಲಾದ ಬಿಂದು |
|---|---|---|---|
| a | Blindness and low vision | 1% | 4 |
| b | Locomotor disability including cerebral palsy, leprosy cured, dwarfism, acid attack victims and muscular dystrophy | 1% | 24 |
| c | Deaf and hard of hearing | 1% | 44 |
| d | Autism, intellectual disability, specific learning disability and mental illness | 1% | 64 |
| e | Multiple disabilities from amongst persons under clauses (a) to (d) including deaf-blindness in the posts identified for each disabilities | | |

ಮೇಲೆ ಕಾಣಿಸಿರುವ ವರ್ಗೀಕರಣವು ಮೀಸಲಾತಿ ಆದೇಶಗಳಲ್ಲಿ ಮಾರ್ಪಾಡು ಆದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ. ಪ್ರಸ್ತುತ ಆದೇಶ ಸಂ: ಸಿಆರ್‌ಸುಇ:149: ಎಸ್ ಆರ್ ಆರ್:2020 ದಿನಾಂಕ:25-09-2020 ರಂತೆ ಅನುಸರಿಸಲಾಗುವುದು

13. ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆ ಸಮಯದಲ್ಲಿ ಕೆಳಕಂಡ ಮೂಲ ದಾಖಲಾತಿಗಳನ್ನು ಹಾಗೂ ನಕಲು ಪ್ರತಿಯೊಂದಿಗೆ ಹಾಜರಿರತಕ್ಕದ್ದು .
    i. ಬಿ.ವಿ.ಎಸ್‌ಸಿ / ಬಿ.ವಿ.ಎಸ್‌ಸಿ ಮತ್ತು ಎಹೆಚ್ ಪದವಿಯ ಎಲ್ಲಾ ವರ್ಷಗಳ (ಸೆಮಿಸ್ಟರ್) ಅಂಕಪಟ್ಟಿಗಳು ಹಾಗೂ ಪ್ರಾವಿಜನಲ್ ಡಿಗ್ರಿ ಪ್ರಮಾಣ ಪತ್ರ.
    ii. ಚಾಲ್ತಿಯಲ್ಲಿರುವ ಪಶುವೈದ್ಯಕೀಯ ಪರಿಷತ್ತಿನ ನೋಂದಣಿ ಪ್ರಮಾಣ ಪತ್ರ
    iii. ಘಟಿಕೋತ್ಸವ ಪದವಿ ಪ್ರಮಾಣ ಪತ್ರ (ಈಗಾಗಲೇ ಪಡೆದಿದ್ದಲ್ಲಿ ಮಾತ್ರ)
    iv. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪ್ರಮಾಣ ಪತ್ರ / ವರ್ಗಾವಣೆ ಪ್ರಮಾಣ ಪತ್ರ / ಕ್ಯುಮುಲೇಟೀವ್ ರೆಕಾರ್ಡ್ (Cumulative Record) ಪ್ರಮಾಣೀಕೃತ ಉಧೃತ ಭಾಗ.

v. ವಿಶೇಷ ಚೇತನರು ಅಂಗವೈಕಲ್ಯದ ಬಗ್ಗೆ (ಶೇ. 40% LV (Low Vision) OL,BL (Locomotor Disablity) ಹಾಗೂ HI (Hearing Impairment) ಸೂಕ್ತ ಪ್ರಾಧಿಕಾರದಿಂದ ವೈದ್ಯಕೀಯ ಪ್ರಮಾಣಪತ್ರ ಸಲ್ಲಿಸುವುದು.

vi. ಸೈನಿಕ ಸೇವೆಯಿಂದ ಬಿಡುಗಡೆಯಾದ / ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ).

vii. ಪ.ಜಾ., ಪ.ಪಂ, ಪ್ರವರ್ಗ-I, ಪ್ರವರ್ಗ- IIಎ, ಪ್ರವರ್ಗ- IIಬಿ, ಪ್ರವರ್ಗ- III ಎ ಮತ್ತು ಪ್ರವರ್ಗ-IIIಬಿ ಮೀಸಲಾತಿ ಕೋರಿದ್ದಲ್ಲಿ ಸಂಬಂಧಿತ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು.

viii. ಕನ್ನಡ ಮಾಧ್ಯಮ / ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಬಯಸುವವರು ಅವಶ್ಯ ದಾಖಲಾತಿ ಒದಗಿಸುವುದು.

ix. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮೀಸಲಾತಿ ಬಯಸುವವರು ಅವಶ್ಯ ದಾಖಲಾತಿ ಒದಗಿಸುವುದು.

x. ಇತ್ತೀಚಿನ ಪಾಸ್‌ಪೋರ್ಟ್ ಸೈಜಿನ ಭಾವಚಿತ್ರವನ್ನು ಆನ್ ಲೈನ್ ಅರ್ಜಿಯಲ್ಲಿ ದಾಖಲಿಸುವುದು

14. ಈ ಪ್ರಕಟಣೆ ಹಾಗೂ ಅರ್ಜಿ ನಮೂನೆಯ ಕುರಿತು ಹೆಚ್ಚಿನ ಮಾಹಿತಿ ಅವಶ್ಯವಿದ್ದಲ್ಲಿ ಜಂಟಿ ನಿರ್ದೇಶಕರು (ಆಡಳಿತ), ಆಯುಕ್ತಾಲಯ, ಪಶುಪಾಲನಾ ಭವನ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು 560 024 ಇವರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ 080-23414446 ಹಾಗೂ ಇಲಾಖೆಯ ವೆಬ್ ವಿಳಾಸ : http://ahvs.karnatak.gov.in ವನ್ನು ಸಂಪರ್ಕಿಸುವುದು.

ಆಯುಕ್ತರು,
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಹೆಬ್ಬಾಳ, ಬೆಂಗಳೂರು 560 024